4) ನಗರದ ಕಾಳಮ್ಮನ ಗುಡಿ ಬೀದಿಯಲ್ಲಿ ಹೊಸದಾಗಿ ಕೊಳವೆ ಬಾವಿಯನ್ನು ಕೊರೆದು ವಿದ್ಯುಚ್ಛಕ್ತಿ ಮುಳುಗು ಯಂತ್ರದಿಂದ ನೀರಿನ ಮುಖ್ಯ ಪೈಪ್‌ಲೈನಿಂಗ್ ಲಿಂಕ್ ಮಾಡಿ ಸಾರ್ವಜನಿಕರಿಗೆ ನೀರಿನ ವಿತರಣೆ ಮಾಡಲಾಗುತ್ತಿದೆ.

ಕೆಮಿಕಲ್ಸ್‌ನಿಂದ ತಯಾರಾದ ಹೆಂಡದ ನಿಷೇಧ.

2639 - ಶ್ರೀ ಕೆ.ಹೆಚ್. ಪನುಮೇಗೌಡ (ಹಾಸನ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಂಡ ತೆಗೆಯಲು ಸಾಕಷ್ಟು ಈಚಲು ಮರಗಳಿಲ್ಲದಿದ್ದರಿಂದಲೂ ಮತ್ತು ಹೆಂಡವನ್ನು ಕೆಲವು ಕೆಮಿಕಲ್‌ಗಳಿಂದ ತಯಾರಿಸಿ ಸರಬರಾಜು ಮಾಡುತ್ತಿರುವುದರಿಂದ ಜನರ ಆರೋಗ್ಯವು ಹಾಳಾಗುವುದೆಂದು ತೀರ್ಮಾನಿಸಿ ಸರ್ಕಾರವು ಹೆಂಡದ ಮಾರಾಟವನ್ನು ನಿಲ್ಲಿಸಿದ್ದುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಸರ್ಕಾರದ ನಿರ್ಧಾರವನ್ನು ಬದಲಾಯಿಸಿ ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಪುನಹ ಹೆಂಡದ ಮಾರಾಟವನ್ನು ಪ್ರಾರಂಭಮಾಡಿರಲು ಕಾರಣಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಆ) ನೆರೆಯ ರಾಜ್ಯಗಳಲ್ಲಿ ಸೇಂದಿಯು ಅತಿ ಸುಲಭವಾಗಿ ದೊರೆಯುತ್ತಿದ್ದು, ಕರ್ನಾಟಕ ರಾಜ್ಯದ ಗಡಿ ಜಿಲ್ಲೆಗಳಿಂದ ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಕಳ್ಳ ಸಾಗಾಣಿಕೆಯಾಗುತ್ತಿದ್ದು 1991-92ರ ಸಾರಾಯಿ ಬಾಡಿಗೆ ಮೇಲೆ ಕೆಟ್ಟ ಪರಿಣಾಮವಾಗುತ್ತಿತ್ತು, ಅದುದರಿಂದ, ಅಬಕಾರಿ ಆದಾಯವನ್ನು ರಕ್ಷಿಸುವುದಕ್ಕೋಸ್ಕರ ಕೆಲವು ತಾಲ್ಲೂಕುಗಳಲ್ಲಿ ಸಾರಾಯಿ ಮಾರಾಟವನ್ನು ಸೇಂದಿ ಮಾರಾಟದ ಜೊತೆಗೆ ಸೇರಿಸಿ ಪ್ರಯೋಗಾರ್ಥವಾಗಿ ನಡೆಸಲಾಗುತ್ತಿದೆ.

ಗ್ರೇಟರ್ ಬೆಂಗಳೂರು ಯೋಜನೆ.

2734 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಪಕ್ಕದಲ್ಲಿ ಗ್ರೇಟರ್ ಬೆಂಗಳೂರು ಯೋಜನೆಯ ರೂಪರೇಖೆಗಳು ತಯಾರಾಗಿವೆಯೇ?

ಆ) ಈ ಯೋಜನೆಯ ಅವಶ್ಯಕತೆ ಇದೆಯೇ?

ಇ) ಈ ಯೋಜನೆಗಾಗಿ ಈ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇನ್ನೂ ತಯಾರಿಸಿರುವುದಿಲ್ಲ.

ಆ) ಅವಶ್ಯಕತೆ ಕಂಡುಬಂದಿದೆ.

ಇ) ಈ ಯೋಜನೆಯನ್ನು ಅಂತಿಮವಾಗಿ ರೂಪಿಸಿರುವುದಿಲ್ಲವಾದ್ದರಿಂದ ಈ ಪಂಚವಾರ್ಷಿಕ ಯೋಜನೆಯಲ್ಲಿ ಬಿಡುಗಡೆ ಮಾಡುವ ಹಣದ ಪ್ರಶ್ನೆ ಸಧ್ಯಕ್ಕೆ ಉದ್ಭವಿಸುವುದಿಲ್ಲ.